ಜಾಗತಿಕ ಜಲ ಸಂಪನ್ಮೂಲ ವರದಿ 2023

Posted at: 09/10/2024

ಜಾಗತಿಕ ಜಲ ಸಂಪನ್ಮೂಲ ವರದಿ 2023
ಜಾಗತಿಕ ಜಲ ಸಂಪನ್ಮೂಲಗಳ ಪ್ರಸ್ತುತ ಸ್ಥಿತಿಗತಿಗಳ ಕುರಿತು ವಿಶ್ವಸಂಸ್ಥೆಯ ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಬಿಡುಗಡೆ ಮಾಡಿರುವ ವರದಿ ಆತಂಕಕಾರಿ ಸಂಗತಿಯನ್ನು ಬೆಳಕಿಗೆ ತಂದಿದೆ.

ವರದಿಯ ಬಗ್ಗೆ ತಿಳಿಯಿರಿ :

ವಿಶ್ವ ಹವಾಮಾನ ಸಂಸ್ಥೆ ಯು 2021 ರಿಂದ ಈ ವಾರ್ಷಿಕ ವರದಿಯನ್ನು ಪ್ರಕಟಿಸುತ್ತಿದೆ.
ಜಾಗತಿಕ ನೀರಿನ ಸಂಪನ್ಮೂಲಗಳ ಕುರಿತ ಸಮಗ್ರ ಹಾಗೂ ಸ್ಥಿರವಾದ ಸಂಪೂರ್ಣ ಅವಲೋಕನವನ್ನು ಈ ವರದಿ ಒದಗಿಸುತ್ತದೆ.

2023 ರ ವರದಿಯ ಮುಖ್ಯ ಅಂಶಗಳು :

2023 ರಲ್ಲಿ ಪ್ರಪಂಚದ ಬಹುತೇಕ ಜೀವನದಿಗಳು ನೀರು ಹರಿವಿನ ಪ್ರಮಾಣದಲ್ಲಿ ದೊಡ್ಡ ಮಟ್ಟದ
ಕುಸಿತವನ್ನು ಕಂಡಿದೆ,
ಕಳೆದ 33 ವರ್ಷಗಳಿಗೆ ಹೋಲಿಸಿದರೆ ನೀರಿನ ಹರಿವಿನ ಪ್ರಮಾಣ 2023 ರಲ್ಲಿ ಅತ್ಯಂತ ಕಡಿಮೆಯಿದೆ.
ಕಳೆದ ಐದು ವರ್ಷಗಳಲ್ಲಿ ಹೆಚ್ಚಿನ ನದಿಗಳಲ್ಲಿ ನೀರಿನ ಹರಿವು ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗಿದೆ.
ಈ ಪರಿಸ್ಥಿತಿಯು ಕೃಷಿ ಮತ್ತು ಕೈಗಾರಿಕೆಗಳಿಗೆ ನೀರಿನ ಲಭ್ಯತೆಯನ್ನು ಕಡಿಮೆ ಮಾಡಿದೆ ಎಂದು ವರದಿ ಎಚ್ಚರಿಸಿದೆ. "ಇದು ನಮ್ಮ ಹವಾಮಾನ ಬಿಕ್ಕಟ್ಟಿನ ಅತ್ಯಂತ ಪ್ರಮುಖ ಸೂಚನೆಗಳಲ್ಲಿ ಒಂದಾಗಿದೆ. ಕಳೆದ 50 ವರ್ಷಗಳಲ್ಲಿ ಹಿಮನದಿಗಳು ದಾಖಲೆಯ ಪ್ರಮಾಣದಲ್ಲಿ ಕರಗುತ್ತಿವೆ. ವರ್ಷಕ್ಕೆ 600 ಗಿಗಾ ಟನ್ ನೀರು ನಷ್ಟವಾಗುತ್ತಿದೆ
ಪ್ರಸ್ತುತ ಜಗತ್ತಿನ 3.6 ಶತಕೋಟಿ ಜನರು ವರ್ಷದಲ್ಲಿ ಕನಿಷ್ಠ ಒಂದು ತಿಂಗಳು ನೀರಿನ ತೀವ್ರ ಅಭಾವ ಎದುರಿಸುತ್ತಿದ್ದಾರೆ. ಈ ಸಂಖ್ಯೆ 2050 ರ ಹೊತ್ತಿಗೆ 5 ಶತಕೋಟಿ ಗೆ ಏರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.
ಜಲಾಶಯಗಳನ್ನು ಸಂರಕ್ಷಿಸಲು ತುರ್ತು ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಮತ್ತು ಜಲವಿಜ್ಞಾನ ಮೇಲ್ವಿಚಾರಣೆಯನ್ನು ಹೆಚ್ಚಿಸಬೇಕಾಗಿದೆ
ನೀರು ಮತ್ತು ನೈರ್ಮಲ್ಯದ ಮೇಲೆ ಕೇಂದ್ರೀಕರಿಸುವ ಸುಸ್ಥಿರ ಅಭಿವೃದ್ಧಿ ಗುರಿ 6 ಅನ್ನು ಸಾಧಿಸುವ ಪ್ರಯತ್ನದಲ್ಲಿ ಜಗತ್ತು ತುಂಬಾ ಹಿಂದುಳಿದಿದೆ ಎಂದು ವರದಿಯಾಗಿದೆ.